**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ ದ ನ್ಯಾ, ದಂಡಾಧಿಕಾರಿಗಳು, ಆಳಂದ.**

**ಸಿ.ಸಿ.ನಂ: 79/2022**

ಫಿರ್ಯಾದುದಾರರು:- ನಿಂಬರ್ಗಾ ಪೋಲೀಸ ಠಾಣೆ

: ವಿರುದ್ಧ :

ಆರೋಪಿತರು:- ಶರಣಯ್ಯ ತಂದೆ ಈರಯ್ಯ ಹಿರೇಮಠ
ಮತ್ತು ಇನ್ನೊಬ್ಬ,

**- ದೋಷಾರೋಪಣೆ:-**

ಶ್ರೀ ಎಸ್. ಎಮ್. ಅರುಟಗಿ, ಬಿ.ಕಾಮ್., ಎಲ್.ಎಲ್.ಬಿ.,(Spl)., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಆಳಂದ, ಆದ ನಾನು, ಆರೋಪಿತರಾದ:

(1. ಶರಣಯ್ಯ,
ತಂದೆ ಈರಯ್ಯ ಹಿರೇಮಠ, **@**
ವ: 28 ವರ್ಷ,
ಉ: ಕೂಲಿ ಕೆಲಸ,
ಸಾ: ಕೊರಹಳ್ಳಿ. ***(Split-Up) )***

2. ಮಡಿವಾಳಯ್ಯ,
ತಂದೆ ಶಂಕ್ರಯ್ಯ ಹಿರೇಮಠ,
ವ: 30 ವರ್ಷ,
ಉ: ಕೂಲಿ ಕೆಲಸ,
ಸಾ: ಕೊರಹಳ್ಳಿ.

ನಿಮ್ಮ ಮೇಲೆ ಆರೋಪಿಸುವುದೇನೆಂದರೆ:-

ದಿನಾಂಕ 01-09-2015 ರಂದು ಮಧ್ಯಾಹ್ನ 12-45 ಗಂಟೆ ಸುಮಾರಿಗೆ, ನಿಂಬರ್ಗಾ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ, ಭೂಸನೂರ ಫ್ಯಾಕ್ಟರಿ ಕ್ರಾಸ್ ಹತ್ತಿರ, ಎನ್ ಎಸ್ ಎಲ್

ಸುಗರ್ಸ್ ಲಿಮಿಟೇಡನ ಟೋಕನ ಆಫೀಸ್ ಹತ್ತಿರ, ಗಿಡದ ಕೆಳಗೆ, ಸಾಕ್ಷಿ-1 ಮತ್ತು 4 ನೇದ್ದವರು ಊಟ ಮಾಡಿ ಮಲಗಿಕೊಂಡಿದ್ದಾಗ, ವಿಭಜಿತ 1 ಮತ್ತು 2 ನೇ ಆರೋಪಿತರಾದ ನೀವು ಸಮಾನ ಏಕೊದ್ದೇಶದಿಂದ ಅಲ್ಲಿಗೆ ಬಂದು ಹಳೆಯ ವೈಷಮ್ಯದಿಂದ ಸಾಕ್ಷಿ-1 ಮತ್ತು 4 ನೇದ್ದವರ ಜೊತೆಗೆ ಜಗಳ ತೆಗೆದು, ವಿಭಜಿತ 1 ನೇ ಆರೋಪಿತರು ಸಾಕ್ಷಿ-1 ನೇದ್ದವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದಿದ್ದು, ಇದು ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ 34 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುವಿರಿ.

ಎರಡನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ, ವಿಭಜಿತ 1 ಮತ್ತು 2 ನೇ ಆರೋಪಿತರಾದ ನೀವು ಸಮಾನ ಏಕೊದ್ದೇಶದಿಂದ ಸಾಕ್ಷಿ-1 ಮತ್ತು 4 ನೇದ್ದವರ ಜೊತೆಗೆ ಜಗಳ ತೆಗೆದು, ವಿಭಜಿತ 1 ನೇ ಆರೋಪಿತರು ಸಾಕ್ಷಿ-1 ನೇದ್ದವರ ಅಂಗಿ ಹಿಡಿದು ಜಗ್ಗಾಡಿ ಅಕ್ರಮವಾಗಿ ಅವರನ್ನು ಮುಂದೆ ಹೋಗದಂತೆ ತಡೆಗಟ್ಟಿದ್ದು, ಇದು ಭಾರತ ದಂಡ ಸಂಹಿತೆ ಕಲಂ 341 ಸಹವಾಚಕ 34 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುವಿರಿ.

ಮೂರನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ, ವಿಭಜಿತ 1 ನೇ ಮತ್ತು 2 ನೇ ಆರೋಪಿತರಾದ ನೀವು ಸಮಾನ ಏಕೊದ್ದೇಶದಿಂದ ಸಾಕ್ಷಿ-1 ಮತ್ತು 4 ನೇದ್ದವರ ಜೊತೆಗೆ ಜಗಳ ತೆಗೆದು, ವಿಭಜಿತ 1 ನೇ ಆರೋಪಿತರು ಕೈಯಿಂದ ಸಾಕ್ಷಿ-4 ನೇದ್ದವರ ಮುಖಕ್ಕೆ ಹೊಡೆದು ನೋವನ್ನುಂಟುಮಾಡಿದ್ದು, ಇದು ಭಾರತ ದಂಡ ಸಂಹಿತೆ ಕಲಂ 323 ಸಹವಾಚಕ 34 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುವಿರಿ.

ನಾಲ್ಕನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ, ವಿಭಜಿತ 1 ನೇ ಮತ್ತು 2 ನೇ ಆರೋಪಿತರಾದ ನೀವು ಸಮಾನ ಏಕೊದ್ದೇಶದಿಂದ ಸಾಕ್ಷಿ-1 ಮತ್ತು 4 ನೇದ್ದವರ ಜೊತೆಗೆ ಜಗಳ ತೆಗೆದು, ವಿಭಜಿತ 1 ನೇ ಆರೋಪಿತರು ರಾಡಿನಿಂದ ಸಾಕ್ಷಿ-1 ನೇದ್ದವರ ತಲೆಗೆ ಹೊಡೆದು ರಕ್ತಗಾಯವನ್ನುಂಟುಮಾಡಿದ್ದು ಹಾಗೂ ಸಾಕ್ಷಿ-4 ನೇದ್ದವರ ಎಡಗೈ ರಟ್ಟೆಗೆ ಹೊಡೆದು ರಕ್ತಗಾಯ ಹಾಗೂ ಗುಪ್ತಗಾಯವನ್ನುಂಟುಮಾಡಿದ್ದು ಹಾಗೂ 2 ನೇ ಆರೋಪಿತನಾದ ನೀನು ಬಡಿಗೆಯಿಂದ ಸಾಕ್ಷಿ-4 ನೇದ್ದವರ ಮುಖಕ್ಕೆ ಹೊಡೆದಿದ್ದು ಹಾಗೂ ಸಾಕ್ಷಿ-1 ನೇದ್ದವರ ಹೊಟ್ಟೆಗೆ ಹಾಗೂ ಬೆನ್ನಿಗೆ ಹೂಡೆ ಬಡೆ ಮಾಡಿ ನೋವನ್ನುಂಟುಮಾಡಿದ್ದು, ಇದು ಭಾರತ ದಂಡ ಸಂಹಿತೆ ಕಲಂ 324 ಸಹವಾಚಕ 34 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುವಿರಿ.

ಕೊನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ, ವಿಭಜಿತ 1 ನೇ ಹಾಗೂ 2 ನೇ ಆರೋಪಿತರಾದ ನೀವು ಸಮಾನ ಏಕೊದ್ದೇಶದಿಂದ ಸಾಕ್ಷಿ-1 ಮತ್ತು ಸಾಕ್ಷಿ-4 ನೇದ್ದವರ ಜೊತೆಗೆ ಜಗಳ ತೆಗೆದು, ವಿಭಜಿತ 1 ನೇ ಆರೋಪಿತರು ಸಾಕ್ಷಿ-1 ನೇದ್ದವರಿಗೆ ನಿನ್ನ ಜೀವ ಸಹಿತ ಬಿಡುವುದಿಲ್ಲ ಅಂತ ಜೀವದ ಬೇದರಿಕೆ ಹಾಕಿದ್ದು, ಇದು ಭಾರತ ದಂಡ ಸಂಹಿತೆ ಕಲಂ 506 ಸಹವಾಚಕ 34 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುವಿರಿ.

ಮೇಲೆ ಹೇಳಿದ ಅಪಾದನೆಗೆ ಈ ನ್ಯಾಯಾಲಯದ ಮುಂದೆ ನೀವು ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.

**ಪೌ.ಪ್ರ.ಸಂ.ಪ್ರ.240(2) ರಡಿಯಲ್ಲಿ ಆರೋಪಿತರ ಹೇಳಿಕೆ**

ಪ್ರಶ್ನೆಃ1 ಈಗ ಓದಿ ಹೇಳಿದ ಆರೋಪಣೆ ಅರ್ಥವಾಗಿದೆಯೇ?

ಉ ಆಃ1***(Split-Up)***

ಆಃ2

ಶ್ನೆಃ2ಃ ಹಾಗಿದ್ದಲ್ಲಿ ನಿಮ್ಮ ಸಮಜಾಯಿಷಿಕೆ ಏನು? ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕು?

ಉ ಆಃ1***(Split-Up)***

ಆಃ2

ದಿನಾಂಕಃ05-04-2024 ರಂದು ಅಪರಾದಿಗೆ/ಗಳಿಗೆ ತಿಳಿದಿರುವ ಭಾಷೆಯಾದ ಕನ್ನಡದಲ್ಲಿ ನನ್ನ ಸಮಕ್ಷಮ ಓದಿ ಹೇಳಿ ಅಭಿಲೇಖಿಸಿರುವ ಈ ಹೇಳಿಕೆ ಅವರ/ನ ಸರಿಯಾದ ಒಕ್ಕಣೆ ಎಂದು ದೃಢೀಕರಿಸುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ ದ ನ್ಯಾ , ದಂಡಾಧಿಕಾರಿಗಳು, ಆಳಂದ.